Regd No B C 155 13-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಮೂಲಭೂತ ಹಕ್ಕುಗಳೆಲ್ಲ ಪೂರ್ಣ ರದ್ದಾಗಬೇಕು

ಹರತಾಳಕ್ಕೆ ಕರೆ

ನವದೆಹಲಿ— ಹಳೇ ಕಾಂಗ್ರೆಸ್ಸಿನ ರಾಜ್ಯ ಮಟ್ಟದ ಸಮ್ಮೇಳನವನ್ನು ಇಲ್ಲಿ ತಾ ॥ 14 ಮತ್ತು 15 ರಂದು ನಡೆಸುವುದನ್ನು ಪ್ರತಿಭಟಿಸಿ, ಹೊಸ ಕಾಂಗ್ರೆಸ್ಸಿನ ಜಿಲ್ಲಾ ಹಂಗಾಮಿ ಸಮಿತಿಯು ತಾ ॥ 14 ರಂದು ಇಲ್ಲಿ ಹರತಾಳಕ್ಕೆ ಕರೆ ಕೊಟ್ಟಿದೆ – ಮಹಾರಾಷ್ಟ್ರ ಏಕೀಕರಣ ಸಮಿತಿಯೂ ಆ ದಿನದ ಹರತಾಳಕ್ಕೆ ಕರೆ ಕೊಟ್ಟಿದೆ.

○

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಎಂ ಸಿ. ಮೋದಿ (ಭಾರತ ರಾಷ್ಟ್ರಾಧ್ಯಕ್ಷರಿಗೆ ಗೌ ॥ ನೇತ್ರ ವೈದ್ಯರು) ಯವರು ಷಹಪುರಿ (ಗುಲ್ಬರ್ಗಾ ಜಿಲ್ಲೆ) ಯಲ್ಲಿ ತಾ ॥ 16 ರಂದು ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರು.

★

ಮಡಕೇರಿ— ಸೋಮವಾರಪೇಟೆಗೆ ಭೇಟಿ ಕೊಟ್ಟ ಗೌರ್ನರ್ ಶ್ರೀ ಧರ್ಮವೀರರವರು ಅಲ್ಲಿ ಆಸ್ಪತ್ರೆಯಲ್ಲಿನ ಒಳರೋಗಿಗಳಿಗೆ ಹಣ್ಣು ಹಂಚಲು ರೂ 100 ಉದಾರ ದಾನಮಾಡಿದರು – ಅವರು ಹೊನ್ನಮ್ಮನ ಕೆರೆ ಇಕ್ಸ್‌ಪೆರ್ಟ್ ಮಾಡಿ, ಕೈಗಾರಿಕಾ ವಸ್ತು ಪ್ರದರ್ಶನಕ್ಕೆ ಭೇಟಿ ಕೊಟ್ಟರು.

ಗೌರ್ನರರ ಕಾರ್ಯ ವಿರುದ್ಧ

ಹೈದರಾಬಾದು – ಗೌರ್ನರರು ವಿಧಾನ ಪರಿಷತ್ತಿಗೆ ಓರ್ವ ಸದಸ್ಯರನ್ನು ನಾಮಕರಣ ಮಾಡಿದ್ದು ರಾಜ್ಯಾಂಗ ವಿರುದ್ಧವೆಂದು ಶಾಸನಸಭೆಯಲ್ಲಿ ಜನಸಂಘದ ಸದಸ್ಯರು ಪ್ರಶ್ನಿಸಿದರು – ಸದಸ್ಯ ಶ್ರೀ ಮಾಕರಾವ ಗೌರ್ನರರ ಭಾಷಣದ ಪ್ರತಿಯನ್ನು ಚೂರು ಚೂರಾಗಿ ಹರಿದು ತಮ್ಮ ಕರವಸ್ತ್ರದಲ್ಲಿ ಅಂದವಾಗಿ ಕಟ್ಟಿ, ಶಾಸನಸಭಾಧ್ಯಕ್ಷರಿಗೆ ಕೊಟ್ಟು, ಅದನ್ನು ಗೌರ್ನರರಿಗೆ ಕಳಿಸಲು ಮನವಿಮಾಡಿದರು

★

ಹಿಂದಿ ಬಗ್ಗೆ ರಿಟ್

ಮದರಾಸು— ಕೇಂದ್ರ ಸರಕಾರದ ನೌಕರರಿಗೆ ಹಿಂದಿ ಖಡ್ಡಾಯವಾಗಿ ತಿಳಿದಿರಬೇಕೆಂಬ ಕೇಂದ್ರ ಸರ್ಕಾರದ ಸುತ್ತೋಲೆಗೆ ಸನಾಲುಹಾಕಿ ಅದರ ವಿರುದ್ಧ ರಿಟ್ ಆನ್ನು ಹೈಕೊರ್ಟಿನಲ್ಲಿ ಡಿಎಂಕೆ ಪಾರ್ಲಿಮೆಂಟು ಸದಸ್ಯ ಶ್ರೀ ಮುರೋಸಿಸ ಮಾರ್ಕ ಹಾಕಿರುವರು.

ಕಡಮೆಯಾಗುತ್ತಿದೆ

ನವದೆಹಲಿ— ರೈಲಿನಲ್ಲಿ ಪ್ರಯಾಣೀಕರ ಸಂಚಾರ ಶೇಕಡ 1.98 ಕಡಮೆಯಾಗುತ್ತಿದೆಯೆಂದು 68-69 ರೈಲ್ವೇ ವಾರ್ಷಿಕ ವರದಿ ತಿಳಿಸುತ್ತದೆ.

ಭಾರಿ ಯೋಚನೆ

ಪೂನಾ— ರಾಜ್ಯಾಂಗದಲ್ಲಿರುವ ಎಲ್ಲ ಹಕ್ಕುಗಳನ್ನೂ ತೆಗೆದುಹಾಕಬೇಕೆಂದು ಯಂಗ್ ಟರ್ಕ್ ಪಾರ್ಲಿಮೆಂಟು ಸದಸ್ಯ ಶ್ರೀ ಮೋಹನ್ ಧರಿಯಾ ಹೇಳಿದರು.

○

ವಿದ್ಯಾರ್ಥಿಗಳಲ್ಲಿ ಘರ್ಷಣೆ

ರಾಯಪುರ— ದುರ್ಗದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಲ್ಲಿನ ವಿರುದ್ಧ ಗುಂಪುಗಳಲ್ಲಿ ಘರ್ಷಣೆಯಾಗಿ, ಒಬ್ಬ ವಿದ್ಯಾರ್ಥಿ ಕಾಲೇಜಿನ ಲ್ಯಾಬರೇಟರಿಯನ್ನು ಸುಡುವುದಾಗಿ ಬೆದರಿಸಿದನು ; ಪೋಲೀಸರು ಬಂದು ವಿದ್ಯಾರ್ಥಿಗಳನ್ನು ಚದುರಿಸಿದರು.

○

ಶ್ರೀಮನ್ಮಹಾರಾಜರು

ಬೊಂಬಾಯಿ— ಮೈಸೂರಿನ ಶ್ರೀಮನ್ಮಹಾರಾಜರವರು ಇಲ್ಲಿಗೆ ಆಗಮಿಸಿರುವರು – ಇಲ್ಲಿ ಕೆಲವು ದಿವಸಗಳಿರುವರು

★

ಪಾಸಸ್ತಾನಕ್ಕೆ ಬೆಂಬಲ

ಖಟ್ಮಂಡು— ಪಾಕಿಸ್ತಾನವನ್ನು ತಟಸ್ಥ ಕೂಟಕ್ಕೆ ಸೇರಿಸಿಕೊಳ್ಳಬೇಕೆಂದು ದಾರ್ ಇಸಲಾಂನಲ್ಲಿ ಏಪ್ರಿಲ್‌ನಲ್ಲಿ ನಡೆಯುವ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ನೇಪಾಳ ಒತ್ತಾಯ ಮಾಡಲಿದೆ.

★

ಇಸ್ರೇಲ್ ಕಾರ್ಯ

ಕೈರೊ— ಅಬುಜಬಾಲ್ ಉಕ್ಕು ಯಂತ್ರಾಗಾರದ ಮೇಲೆ ಇಸ್ರೇಲಿ ವಿಮಾನಗಳು ಧಾಳಿ ನಡೆಸಿದರಲ್ಲಿ 70 ಮಂದಿ ಈಜಿಪ್ಸಿಯನ್ನರು ಸತ್ತರು – ಆರ್ಮಾನಲ್ಲಿ 8 ಮಂದಿ ಪಾಲಿಸ್ಟೈನ್ ಸೈನ್ಯಾಧಿಕಾರಿಗಳು ಕೊಲ್ಲಲ್ಪಟ್ಟರು.

ಎಮ್ಮೆ ಜೂಜು

ಸುರತ್ಕಲ್‌ನಲ್ಲಿ ಗೌರ್ನರರ ಮುಂದೆ ಕಂಬ್ಲ (ಎಮ್ಮೆ ಜೂಜು) ಮೊನ್ನೆ ಸಂಜೆ ನಡೆಸಲಾಯಿತು – ದಕ್ಷಿಣ ಕನ್ನಡದ ವೈಶಿಷ್ಟ್ಯ ಗ್ರಾಮಾಂತರ ಕ್ರೀಡೆಯಾದ ಇದು ಗೌರ್ನರ ಮನಸ್ಸಿಗೆ ನಾಟುವಂತಿತ್ತು – ಗೌರ್ನರರು ಬಹುಮಾನ ವಿತರಣೆ ಮಾಡಿದರು.

○

ಬೈಠಕ್ ಸತ್ಯಾಗ್ರಹ

ಬೆಂಗಳೂರು— ಕಚ್ಚಾ ರೇಷ್ಮೆ ವ್ಯಾಪಾರಿಗಳ ಸಂಘದೊಡನೆ ಒಪ್ಪಂದವಾದುದರಿಂದ, ರೇಷ್ಮೆ ಕೈಮಗ್ಗ ಕಾರ್ಮಿಕರು ನಾಲ್ಕು ದಿನಗಳಿಂದ ನಡೆಸುತ್ತಿದ್ದ ಬೈಠಕ್ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆ ಎಂದು ಪೌರ ಸಮಿತಿ ಅಧ್ಯಕ್ಷ ಶ್ರೀ ಕೆ ಎಂ ನಾಗಣ್ಣನವರು ಹೇಳಿದರು.

★

ನೇತಾಜಿ ಸಾಕ್ಷ್ಯ ಚಿತ್ರ

ನವದೆಹಲಿ— ನೇತಾಜಿ ಬೋಸರ ಬಗ್ಗೆ ಜೀವಚರಿತ್ರೆಯ ಸಾಕ್ಷ್ಯ ಚಿತ್ರ ತಯಾರಿಸಲು ಬಂಗಾಳಿಯಾದ ಪ್ರಸಿದ್ಧ ಚಿತ್ರ ನಿರ್ಮಾಪಕ ಮ್ರಿನಾಲ್ ಸೇನ್‌ಗೆ ಸರ್ಕಾರ ತಿಳಿಸಿದೆ.

ಬೆಂಬಲ ನೀಡುವರೆಂತೆ

ನವದೆಹಲಿ— ಬ್ಯಾಂಕು ರಾಷ್ಟ್ರೀಕರಣ ಉಳಿಸಲು ಹಳೇ ಕಾಂಗ್ರೆಸ್ ಬೆಂಬಲ ನೀಡುವುದೆಂದು ಘೋಷಿಸಲಾಗಿದೆ.

ಗುಲ್ಬರ್ಗಾ ಬಂದ್

ಗುಲ್ಬರ್ಗ— ಹೈದರಾಬಾದು ಕರ್ನಾಟಕ ವಿದ್ಯಾ ಸಂಸ್ಥೆಯ ವಿರುದ್ಧ ಕರೆಯಲಾಗಿದ್ದ ಗುಲ್ಬರ್ಗ ಬಂದ್‌ನಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತರಗತಿಗಳಿಗೆ ಹೋಗದೇ, ಪಾರ್ಲಿಮೆಂಟು ಸದಸ್ಯ ಶ್ರೀ ಮಹದೇವಪ್ಪ ರಾಂಪುರೇರವರ ನಿವಾಸದ ಮೇಲೆ ಕಲ್ಲಿನ ಮಳೆ ಸುರಿಸಿದರು.

ತಾ. 13-2-70 ನೇ ಶುಕ್ರವಾರದಿಂದ 2 ನೇ ವಾರ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರದಲ್ಲಿ

ಪ್ರತಿ ದಿನ 2-30, 6 ಮತ್ತು 9-30 ಕ್ಕೆ — 2-45, 6-15 ಮತ್ತು 9 45ಕ್ಕೆ

.... ದೇವೇಂದ್ರ ಗೋಯಲ್ಸ್‌ರವರ ವರ್ಣಮಯ ಚಿತ್ರಕ್ಕೆ ವರ್ಣರಂಜಿತ ಚಿತ್ರ ....

'ಫಿಕ್ ಫೂಲ್ ದೋ ಮಾಲಿ'

ಪಾತ್ರ— ಸಂಜಯ್, ಸಾಧನ, ಬಾಲರಾಜ್ ಸಹಾನಿ

ದಿಗ್ದರ್ಶನ : ದೇವೇಂದ್ರ ಗೊಯಲ್ ಸಂಗೀತ : ರವಿ

ವಾರ್ತಾವಿಶೇಷಗಳು:

ಮೈಸೂರು — ಪಶ್ಚಿಮ ಘಟ್ಟದಲ್ಲಿನ 6500 ಎತ್ತರದ ಕುದುರೇಮುಖ ಶಿಖರವನ್ನು ಹತ್ತಲು 12 ಮಂದಿ ತಂಡವು ಇಲಿಂದ ತಾ॥ 22 ರಂದು ಹೊರಡುವುದು.

ಹಾಂಕಾಂಗ್— ಚಾಲಕನಿಲ್ಲದ ಅಮೆರಿಕಾದ ಅತಿ ಎತ್ತರದಲ್ಲಿ ಹಾರುವ ವಿಮಾನವನ್ನು ಚೀನಾ ಹೊಡೆದುರುಳಿಸಿರುವದಾಗಿ ಹೇಳಿದೆ.

ವಿಯೆನ್ನಾ— ಸೇನಾ ಎಂಜಿನಿಯರರ ದಳದ ಎಂಟು ಜನ ಅಧಿಕಾರಿಗಳ ತಂಡವು ಇದೇ ಫೆಬ್ರವರಿ 15 ರಂದು ಸಣ್ಣ ದೋಣಿಗಳಲ್ಲಿ ಮದರಾಸಿನಿಂದ ಆಂಡಮಾನ್ ದ್ವೀಪಗಳ ಪೋರ್ಟ್ ಬ್ಲೇರ್ ವರೆಗೆ ಸಮುದ್ರಯಾನವನ್ನು ಕೈಗೊಳ್ಳುವುದು.

ಜಯಪುರ— ಸುಸಂಘಟಿತ ವಿದ್ಯಾರ್ಥಿ ಸಮಿತಿ ಕರೆದಿದ್ದ ಒಂದು ದಿನದ ಜಯಪುರ್ ಬಂದ್ ನಿನ್ನೆ ಯಶಸ್ವಿಯಾಗಿ ನಡೆದು, ಎಲ್ಲಾ ಅಂಗಡಿಗಳೂ, ವಾಣಿಜ್ಯ ಸಂಸ್ಥೆಗಳು, ಪೆಟ್ರೋಲು ಸಂಪುಗಳೂ ಮುಚ್ಚಲ್ಪಟ್ಟಿದ್ದವು; ಎಲ್ಲಾ ಒಸ್ಸುಗಳ ಓಟ ನಿಂತಿತ್ತು.

University of Mysore

NOTIFICATION

No 7590-95/69-70 dated 5th February, 1970

Applications from the intending candidates are invited by the undersigned to the following posts :

Designation	Scale of Pay	Qualifications
1 Packers, Grade I	Rs. 80-3-110 -4-130-5-150	V Form or X Standard Course with a diploma in packing techniques or with experience in packing
2 Packers Grade III	Rs 50-1-60	—
3 Counter	Rs 50-1-60	—

Applications should contain the particulars of (1) The name and address of the applicant; (2) Qualification both general and technical; (3) Date of birth; (4) Previous Experience. Applications should reach the undersigned on or before 20th February, 1970. Attested copies of certificates and challan for having remitted an application fee of Rs 2/- in the State Bank of Mysore to the credit of "Mysore University Funds" should be enclosed to the application Candidates belonging to scheduled caste and scheduled tribe are exempted from payment of the application fee. Applications received after the due date or without challan for having remitted the prescribed fee will be rejected

Posts are not pensionable but provident fund benefit is admissible Applicants should be prepared for an interview at their own cost if called for.

DIRECTOR
Prasaranga
University of Mysore
Manasagangotri
MYSORE-6

ಪುರ್ತಲಂಡ್ ಅಮೋಘ 7 ನೇ ವಾರ
ಶನಿ ಅಮೋಘ ಪ್ರಾರಂಭ

.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಆಶ್ವಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— 6-2-70 ರಿಂದ

.... ಅತ್ಯಮೋಘ ಹಿಂದಿ ಚಿತ್ರ ....

ಪ್ಯಾರ್ ಹಿ ಪ್ಯಾರ್
ಶೀಲ

ಪಾತ್ರ — ವೈಜಯಂತಿ ಮಾಲ ಧರ್ಮೇಂದ್ರ

ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟಣೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-0ಪಿ
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ॥ ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಟ್ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI
SUDHA

A Superb Tonic

Edited Printed Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4